
# ಯುವಚೇತನ



ಎಲ್ಲಾ ಮೂಢನಂಬಿಕೆಗಳನ್ನೂ ಕಿತ್ತೊಗೆದು, ನಾನೇ ಅವ್ಯಕ್ತ ಬ್ರಹ್ಮನೆಂದು ನಿರ್ಭೀತಿಯಿಂದ ನಿಂತರೆ, ಎಂತಹ ಶಕ್ತಿಯ ಗಣಿ ಅಲ್ಲಿರುವುದು! ಯಾವುದಕ್ಕೆ ನಾನು ಅಂಜುವುದು? ಪ್ರಕೃತಿ ನಿಯಮಗಳನ್ನೂ ನಾನು ಲೆಕ್ಕಿಸುವುದಿಲ್ಲ , ಮೃತ್ಯುವನ್ನು ನೋಡಿ ನಗುವೆನು. ನಾನು ಅನಂತವಾದ ಸನಾತನವಾದ ಚ್ಯುತಿಯಿಲ್ಲದ ನಾಶವಿಲ್ಲದ ನನ್ನ ಆತ್ಮಮಹಿಮೆಯ ಮೇಲೆ ನಿಲ್ಲುವೆನು. ಯಾವ ಶಸ್ತ್ರವೂ ಅದನ್ನು ಭೇದಿಸಲಾರದು, ಶಾಖ ಒಣಗಿಸಲಾರದು, ಬೆಂಕಿ ಸುಡಲಾರದು, ನೀರು ಕರಗಿಸಲಾರದು. ಅದು ಅನಂತ, ಜನನ ಮರಣಾತೀತ ಮತ್ತು ಆದಿ-ಅಂತ್ಯ ರಹಿತ. ಅದರ ಬೃಹತ್ತಿನ ಮುಂದೆ ಸೂರ್ಯಚಂದ್ರಾದಿಗಳು ಸಾಗರದ ಬಿಂದುಗಳಂತೆ ಕಾಣುವುವು. ಅದರ ಮಹಿಮೆಯ ಎದುರಿಗೆ ದೇಶ ಮಾಯವಾಗುವುದು. ಕಾಲ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತದೆ. ಇಂತಹ ಮಹಾ ಆತ್ಮವನ್ನು ನಾವು ನಂಬಬೇಕು; ಅದರಿಂದ ಶಕ್ತಿ ಬರುವುದು; ನೀವು ಇಚ್ಛಿಸುವುದೆಲ್ಲಾ ಪ್ರಾಪ್ತವಾಗುವುದು. ದುರ್ಬಲರೆಂದು ಯೋಚಿಸಿದರೆ ದುರ್ಬಲವಾಗುವಿರಿ. ಶಕ್ತಿವಂತರೆಂದು ಯೋಚಿಸಿದರೆ ಶಕ್ತಿವಂತರಾಗುವಿರಿ. ಅಶುದ್ಧರೆಂದು ಭಾವಿಸಿದರೆ ಅಶುದ್ಧರಾಗುವಿರಿ. ಶುದ್ಧರೆಂದು ಯೋಚಿಸಿದರೆ ಶುದ್ಧರಾಗುವಿರಿ. ದುರ್ಬಲರೆಂದು ಭಾವಿಸದೆ, ತೇಜಸ್ವಿಗಳು ನಾವು, ಸರ್ವಶಕ್ತಿವಂತರು ನಾವು, ಜ್ಞಾನಿಗಳು ನಾವು ಎಂದು ಭಾವಿಸಿ ಎನ್ನುವುದು ಅದ್ವೈತವಾದ. ಅದನ್ನು ನಾನು ಇದುವರೆಗೆ ವ್ಯಕ್ತಪಡಿಸದೆ ಇದ್ದರೆ ಚಿಂತೆಯಿಲ್ಲ. ಅದು ನನ್ನಲ್ಲಿರುವುದು, ಅನಂತ ಜ್ಞಾನ ನನ್ನಲ್ಲಿದೆ, ಅನಂತಶಕ್ತಿ, ಪವಿತ್ರತೆ, ಸ್ವಾತಂತ್ರ್ಯವೆಲ್ಲ ನನ್ನಲ್ಲಿದೆ. ನಾನೇಕೆ ಈ ಜ್ಞಾನವನ್ನು ವ್ಯಕ್ತಪಡಿಸಬಾರದು? ನನಗೆ ಅದರಲ್ಲಿ ಶ್ರದ್ಧೆಯಿಲ್ಲ. ಶ್ರದ್ಧೆ ಹುಟ್ಟಲಿ, ಇವೆಲ್ಲ ವ್ಯಕ್ತವಾಗುವುವು. ನಿರ್ಗುಣಬ್ರಹ್ಮ ಭಾವನೆಯು ಬೋಧಿಸುವುದು ಇದನ್ನು. ಬಾಲ್ಯದಿಂದಲೇ ನಿಮ್ಮ ಮಕ್ಕಳನ್ನು ಪೌರುಷವಂತರನ್ನಾಗಿ ಮಾಡಿ. ಅವರಿಗೆ ದುರ್ಬಲತೆಯನ್ನು ಮತ್ತು ಬರಿಯ ಬಾಹ್ಯಾಚಾರಗಳನ್ನು ಬೋಧಿಸಬೇಡಿ. ಬಲಾಢ್ಯರನ್ನಾಗಿ ಮಾಡಿ. ಅವರು ತಮ್ಮ ಕಾಲಿನ ಮೇಲೆ ತಾವು ನಿಂತುಕೊಳ್ಳಲಿ, ಧೀರರಾಗಲಿ, ವಿಜಯಿಗಳಾಗಲಿ, ಸಹಿಷ್ಣುಗಳಾಗಲಿ, ಆತ್ಮನ ಮಹಾತ್ಮೆಯನ್ನು ಮೊದಲು ಅರಿಯಲಿ. ನಿಮಗೆ ಈ ಭಾವನೆ ವೇದಾಂತದಲ್ಲಿ ಮಾತ್ರ ದೊರಕುವುದು. ಉಳಿದ ಧರ್ಮಗಳಲ್ಲಿರುವಂತೆಯೇ ಅದರಲ್ಲಿಯೂ ಪ್ರೀತಿ ಪೂಜೆ ಮುಂತಾದವು ಬಹಳ ಇದೆ. ಆದರೆ ಜೀವನೋತ್ಸಾಹವನ್ನು ತುಂಬುವ ಅದ್ಭುತವಾದ ಈ ಆತ್ಮಭಾವನೆ ಇಲ್ಲಿ ಮಾತ್ರ ಇದೆ. ಜಗತ್ತಿನಲ್ಲೆಲ್ಲಾ ಒಂದು ಕ್ರಾಂತಿಯನ್ನು ತರುವ ಭಾವನೆ ಇಲ್ಲಿ ಮಾತ್ರ ಇದೆ. ಜಡವಿಜ್ಞಾನವನ್ನು ಧರ್ಮದೊಂದಿಗೆ ಸಮನ್ವಯಗೊಳಿಸುವುದು ಇದು ಮಾತ್ರ. *(ಕೃತಿಶ್ರೇಣಿ, ಸಂ.೩, ಪು.೨೪)*

ಭಾವೀ ದೇಶಭಕ್ತರೇ, ಸಮಾಜ ಸುಧಾರಕರೇ, ಮೊದಲು ದೇಶಭಕ್ತಿಯನ್ನು ಹೃದಯದಲ್ಲಿ ಅನುಭವಿಸಿ. ಕೋಟ್ಯಂತರ ದೇವ ಸಂತಾನರು ಮತ್ತು ಋಷಿಸಂತಾನರು ಪಶುಸಂತಾನರಾಗಿರುವರೆಂದು ನಿಮಗೆ ಹೃದಯದಲ್ಲಿ ವ್ಯಥೆ ಇದೆಯೆ? ಕೋಟ್ಯಂತರ ಜನರು ಈಗ ಉಪವಾಸದಿಂದ ನರಳುತ್ತಿರುವರು, ಹಿಂದಿನಿಂದಲೂ ಕೋಟ್ಯಂತರ ಜನರು ಅದರಿಂದ ನರಳುತ್ತಿದ್ದರು ಎಂಬುದು ಗೊತ್ತೆ? ಅಜ್ಞಾನವು ಕಾರ್ಮೋಡದಂತೆ ಭಾರತವನ್ನೆಲ್ಲಾ ವ್ಯಾಪಿಸಿದೆ ಎಂಬುದು ನಿಮಗೆ ಗೊತ್ತಾಗುತ್ತಿದೆಯೆ? ಇದರಿಂದ ನೀವು ಅಶಾಂತರಾಗಿದ್ದೀರಾ? ಇದರಿಂದ ನಿಮ್ಮ ನಿದ್ರೆಗೆ ಭಂಗ ಬಂದಿದೆಯೆ? ಇದು ನಿಮ್ಮ ರಕ್ತದಲ್ಲಿ ವ್ಯಾಪಿಸಿದೆಯೆ? ನಾಡಿಯಲ್ಲಿ ಸಂಚರಿಸಿ ನಿಮ್ಮ ಹೃದಯಚಲನೆಯೊಂದಿಗೆ ಸ್ಪಂದಿಸುತ್ತಿದೆಯೆ? ಇದು ನಿಮ್ಮನ್ನು ಉನ್ಮತ್ತರನ್ನಾಗಿ ಮಾಡುತ್ತಿದೆಯೆ? ಈ ಸರ್ವನಾಶದ ದುಃಖ ನಿಮ್ಮನ್ನು ವ್ಯಾಪಿಸಿ, ನಿಮ್ಮ ಕೀರ್ತಿ ಯಶಸ್ಸು ಹೆಂಡಿರು ಮಕ್ಕಳು ಆಸ್ತಿ ಮತ್ತು ದೇಹವನ್ನು ನೀವು ಮರೆತಿರುವಿರಾ? ನೀವು ಇದನ್ನು ಮಾಡಿರುವಿರಾ? ದೇಶಭಕ್ತರಾಗುವುದಕ್ಕೆ ಇದೇ ಮೊದಲನೆಯ ಹೆಜ್ಜೆ.

*(ಕೃತಿಶ್ರೇಣಿ, ಸಂ.೩, ಪು.೧೦೫)*

ಶಿಷ್ಯರಲ್ಲಿ ಇರಬೇಕಾದ ಮುಖ್ಯ ಲಕ್ಷಣ, ಶುದ್ಧ ಮನಸ್ಸು, ನಿಜವಾದ ಜ್ಞಾನಾಕಾಂಕ್ಷೆ ಮತ್ತು ಸತತ ಪ್ರಯತ್ನ. ಯಾವ ಹೀನ ಮನಸ್ಸಿನವನೂ ಧಾರ್ಮಿಕನಾಗಲಾರ. ಅದೇ ಮುಖ್ಯವಾದ ಲಕ್ಷಣ. ಸರ್ವತೋಮುಖವಾದ ಪಾವಿತ್ರ್ಯ ಅತ್ಯಂತ ಆವಶ್ಯಕ. ಮತ್ತೊಂದು ಲಕ್ಷಣವೇ ನಿಜವಾದ ಜ್ಞಾನಾಕಾಂಕ್ಷೆ. ಯಾರಿಗೆ ಬೇಕು? ಅದೇ ಪ್ರಶ್ನೆ. ನಮಗೆ ಬೇಕಾದುದೆಲ್ಲ ಸಿಕ್ಕುವುದು. ಇದೊಂದು ಬಹಳ ಹಳೆಯ ನಿಯಮ. ಯಾರಿಗೆ ಬೇಕೊ ಅವರಿಗೆ ಸಿಕ್ಕುವುದು. ಧರ್ಮ ಬೇಕು ಎನ್ನುವುದು ಬಹಳ ಕಷ್ಟ. ನಾವು ಸಾಧಾರಣವಾಗಿ ಆಲೋಚಿಸುವಷ್ಟು ಸುಲಭವಲ್ಲ. ಧರ್ಮವೆಂದರೆ ಬೋಧನೆಯನ್ನು ಕೇಳುವುದಲ್ಲ; ಪುಸ್ತಕವನ್ನು ಓದುವುದಲ್ಲ; ಇದನ್ನು ನಾವು ಯಾವಾಗಲೂ ಮರೆಯುವೆವು. ಅದೊಂದು ದೀರ್ಘಸಾಧನೆ, ನಾವು ಗುರಿಯನ್ನು ಸೇರುವವರೆಗೆ ನಮ್ಮ ಸ್ವಭಾವದೊಂದಿಗೆ ನಡೆಸುವ ಅನವರತ ಹೋರಾಟ. ಇದೇನು ಒಂದೆರಡು ದಿನಗಳ, ವರ್ಷಗಳ, ಜನ್ಮಗಳ ಮಾತಲ್ಲ, ನೂರಾರು ಜನ್ಮಗಳೂ ಬೇಕಾಗಬಹುದು. ಅದಕ್ಕೆ ನಾವು ಸಿದ್ಧರಾಗಿರಬೇಕು. ಅದು ತಕ್ಷಣವೇ ಸಿದ್ಧಿಸಬಹುದು, ಅಥವಾ ನೂರಾರು ಜನ್ಮಗಳನ್ನು ಎತ್ತಬೇಕಾಗಬಹುದು. ಅದಕ್ಕೆ ನಾವು ಸಿದ್ಧರಾಗಿರಬೇಕು. ಇಂತಹ ಛಲದಿಂದ ಯಾವ ಶಿಷ್ಯನು ಹೋರಾಡುತ್ತಾನೆಯೋ ಅವನಿಗೆ ಜಯ ಲಭಿಸುವುದು. *(ಕೃತಿಶ್ರೇಣಿ, ಸಂ.೧, ಪು.೧೪೮)*

# ಶ್ರೀ ಕೃಷ್ಣನ ಲೀಲಾತಾಣ ಗೋವರ್ಧನ

ಡಾ. ಕೆ.ಎಲ್. ಪ್ರಸನ್ನಾಕ್ಷೀ



ನಮ್ಮ ದೇಶದಲ್ಲಿ ಒಂದೊಂದು ಕಲ್ಲೂ ಅವತಾರಪುರುಷರ ಕಥೆಯನ್ನು ಹೇಳುವುದೆಂಬ ಮಾತಿದೆ. ಅದರಂತೆ, ವೃಂದಾವನದ ಗೋವರ್ಧನ ಗಿರಿಯು ಶ್ರೀಕೃಷ್ಣನ ದಿವ್ಯಲೀಲೆಯ ಕಥೆಯೊಂದಿಗೆ ಇಂದಿಗೂ ಭಕ್ತರನ್ನು ಆಕರ್ಷಿಸುತ್ತಿದೆ. ಈ ಪರ್ವತದ ಹಿನ್ನೆಲೆ, ಮಹಿಮೆ ಹಾಗೂ ವಿಶೇಷತೆಯನ್ನು ವಿವರಿಸಿರುವ ಲೇಖಕಿ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು. ಅನೇಕ ಗ್ರಂಥಗಳನ್ನೂ ಲೇಖನಗಳನ್ನೂ ಬರೆದಿರುವ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.

**ಸ್ವಾ**ಮಿ ವಿವೇಕಾನಂದರು ಪಾಶ್ಚಾತ್ಯ ದೇಶಗಳಲ್ಲಿ ಹಲವಾರು ವರ್ಷಗಳಿದ್ದು ಹಿಂತಿರುಗಿ ಭಾರತಕ್ಕೆ ಹೊರಟಾಗ ವಿದೇಶಿಯೊಬ್ಬನು, ''ಇಷ್ಟು ಕಾಲ ಪಾಶ್ಚಾತ್ಯ ದೇಶಗಳಲ್ಲಿ ವಾಸ ಮಾಡಿದ ಮೇಲೆ ಈಗ ನಿಮ್ಮ ದೇಶ ಕುರಿತು ನಿಮ್ಮ ಅಭಿಪ್ರಾಯವೇನು?'' ಎಂದು ಕೇಳಿದನು. ಅದಕ್ಕೆ ಸ್ವಾಮೀಜಿ, ''ಇಲ್ಲಿಗೆ ಬರುವ ಮೊದಲು ನಾನು ಭಾರತವನ್ನು ಪ್ರೀತಿಸುತ್ತಿದ್ದೆ, ಈಗ ಭಾರತದ ಮಣ್ಣಿನ ಕಣಕಣವನ್ನೂ ನಾನು ಪ್ರೀತಿಸುತ್ತೇನೆ, ಗೌರವಿಸುತ್ತೇನೆ'' ಎಂದು ಉತ್ತರಿಸಿದರು. ಅಷ್ಟೇ ಅಲ್ಲದೆ ಅವರ ಹಡಗು ಭಾರತದ ನೆಲವನ್ನು ಮುಟ್ಟಿದಾಗ ಅವರು ಮೊದಲು ಮಾಡಿದ ಕೆಲಸ, ಒಂದು ಹಿಡಿ ಮಣ್ಣನ್ನು ತೆಗೆದು ತಮ್ಮ ತಲೆಗೆ ಸೋಕಿಸಿದುದು.

ಏನು 'ಭಾರತ'ದ ಅಂತಹ ವೈಶಿಷ್ಟ್ಯ? ಸ್ವಾಮೀಜಿ ಹೇಳುತ್ತಾರೆ: ''ಭಾರತದ ಮೂಲೆ ಮೂಲೆಯಲ್ಲಿ ಎಲ್ಲಿಂದ ಎಲ್ಲಿ ಹೋದರೂ ಒಬ್ಬ ನೇಗಿಲು ಹಿಡಿದು ಉಳುವವನಿಂದ ಘನ ವಿದ್ವಾಂಸರವರೆಗೆ ಎಲ್ಲರ ಬಾಯಲ್ಲೂ ಭಾವನೆಯಲ್ಲೂ ಅಧ್ಯಾತ್ಮ ಭಾವ ತುಂಬಿರುತ್ತದೆ'' ಎಂದು. ಆದುದರಿಂದಲೇ ಭಗವಂತನು ನಾರದರನ್ನು, 'ನಿನಗೇನು ಬೇಕು?' ಎಂದು ಕೇಳಲು, ಶಾಶ್ವತ ಆನಂದದಾಯಕವಾದ ಮೋಕ್ಷವನ್ನೂ ಬಯಸದೆ ಭಾರತದಲ್ಲಿ ಕಲ್ಲು , ಮರ, ಕೀಟ, ಹಕ್ಕಿ, ಪಶುವಾಗಿಯಾದರೂ ತನಗೆ ಜನ್ಮವಿರಲಿ ಎಂದು ನಾರದರು ಬೇಡಿದರೆಂದು *ವಿಷ್ಣುಪುರಾಣ* ತಿಳಿಸುತ್ತದೆ:

**ನ ಮೇ ವಾಂಛಾಸ್ತಿ ಯಶಸಿ ವಿದ್ವತ್ವೇ ನ ಚ ವಾ ಸುಖೇ ।**
**ಪ್ರಭುತ್ವೇ ನೈವ ವಾ ಸ್ವರ್ಗೇ ಮೋಕ್ಷೇऽಪ್ಯಾನಂದದಾಯಕೇ ॥**



ಇಂದಿನ ಗೋವರ್ಧನ

**ಪರಂ ತು ಭಾರತೇ ಜನ್ಮ ಮಾನವಸ್ಯ ಚ ವಾ ಪಶೋಃ ।**
**ವಿಹಂಗಸ್ಯ ವಾ ಜಂತೋಃ ವೃಕ್ಷ ಪಾಷಾಣಯೋರಪಿ ॥**

ಇಲ್ಲಿ ಕಲ್ಲು, ಮಣ್ಣು, ನದಿ, ಬೆಟ್ಟ, ಗುಡ್ಡ, ಮರ ಎಲ್ಲವೂ 'ಚಿನ್ಮಯ', ಎಲ್ಲವೂ ಭಗವನ್ಮಯ. ಎಲ್ಲಿಂದ ಎಲ್ಲಿ ಹೋದರೂ ಭಗವತ್ಸಂಬದ್ಧ ವಿವಿಧ ಲೀಲಾಪ್ರಸಂಗಗಳಿಗೆ ಆ ಕ್ಷೇತ್ರಗಳೂ ಅಲ್ಲಿನ ಭೂಭಾಗಗಳೂ ಸಾಕ್ಷೀಭೂತವಾದ ಒಂದಲ್ಲ ಒಂದು ಕಥೆಯನ್ನು ಅಲ್ಲಿನ ಜನತೆ ತಿಳಿಸುತ್ತಾರೆ. ಅದರಲ್ಲಿ ಅವರಿಗೆ ಪೂರ್ಣಶ್ರದ್ಧೆ , ವಿಶ್ವಾಸವಿದೆ. ಹಾಗಿರುವಾಗ ಸಕಲರ ಹೃದಯಗಳನ್ನು ತಮ್ಮೆಡೆಗೆ ಸೆಳೆದುಕೊಳ್ಳುವ ಮೋಹನಾಂಗ ಕೃಷ್ಣನು ಅನೇಕ ವರ್ಷಗಳ ಕಾಲ ಸಂಚರಿಸಿ ತನ್ನ ಪಾದಮುದ್ರೆಗಳಿಂದ ಪಾವನಗೊಳಿಸಿದ, ತನ್ನ ವಿವಿಧ ಹಾವಭಾವಗಳಿಂದ ಆಟಪಾಠಗಳಿಂದ ಗೋ-ಗೋಪ-ಗೋಪೀಜನರನ್ನು ಆಬಾಲವೃದ್ಧರಾದಿಯಾಗಿ ತನ್ಮಯಗೊಳಿಸಿದ, ಮೈಮರೆಸಿದ, ತನ್ನ ಕೊಳಲಗಾನದಿಂದ ಪ್ರಕೃತಿಯನ್ನೇ ಸ್ತಬ್ಧಗೊಳಿಸಿದ, ಪವಿತ್ರ ಬೃಂದಾವನದ ಕುರಿತು ಹೇಳುವುದೇನಿದೆ !

## ವೃಂದಾವನ-ಗೋವರ್ಧನ

ನಂದಗೋಪನ ಆಧಿಪತ್ಯ ಇದ್ದ ಗೋಕುಲದಲ್ಲಿ ದಿನಕ್ಕೊಂದು ರೀತಿಯ ಹಾವಳಿಗಳು ಉಂಟಾಗುತ್ತಿದ್ದುದನ್ನು ಗಮನಿಸಿ ಗೋಪಾಲರೆಲ್ಲರೂ ಕಂಗೆಟ್ಟಿದ್ದರು. ಆಗ ನಂದಗೋಪ ಗ್ರಾಮದ ಹಿರಿಯರೆಲ್ಲರೊಡನೆ ಸಮಾಲೋಚಿಸಿ, ಸಂಪೂರ್ಣ ಊರುಊರನ್ನೇ ಸಮೀಪದಲ್ಲೇ ಇದ್ದ ವೃಂದಾವನಕ್ಕೆ ವರ್ಗಾಯಿಸುವುದೆಂದು ನಿಶ್ಚಯಿಸಿದನು. ಆ ಸುಂದರವಾದ ವೃಂದಾವನ, ಅಲ್ಲಿ ಹರಿಯುತ್ತಿರುವ ಯಮುನಾ ನದಿ, ನದೀತೀರದ ಮರಳು ಪ್ರದೇಶ, ಅಲ್ಲಿನ ಪ್ರಾಕೃತಿಕ ಸೌಂದರ್ಯದ ಸಮೃದ್ಧಿ ನೋಡಿ ಬಲರಾಮ ಕೃಷ್ಣ ಗೋಪಬಾಲರಾದಿಯಾಗಿ ಎಲ್ಲರೂ ಉಬ್ಬಿಹೋದರು. ಆ ವೃಂದಾವನದಲ್ಲಿ ಮುಂಜವನ ನಿಧುವನ ಮೊದಲಾದ ಬೇರೆ ಬೇರೆ ವನಗಳು ಇದ್ದವು. ಅಲ್ಲಿ ಗೋವರ್ಧನ ಪರ್ವತವೂ ಇದ್ದಿತು. ಮುಗ್ಧತೆ, ಸೌಂದರ್ಯಗಳ ಪ್ರತೀಕವಾದ ಜಿಂಕೆ ನವಿಲುಗಳ ಸಮೃದ್ಧಿ, ಚೆನ್ನಾಗಿ ಅರಳಿದ ವಿವಿಧ ಬಣ್ಣದ ಹೂವುಗಳ ಸಮೃದ್ಧಿಯಿಂದ ಕೂಡಿದ ಹಲವಾರು ಬಗೆಯ ಮರಗಳು, ಆ ಹೂವಿನ ಆಕರ್ಷಣೆಯಿಂದ ಎಲ್ಲ ಕಡೆಯಿಂದ ಝೇಂಕರಿಸುತ್ತಾ ಹಾರಿ ಬರುವ ದುಂಬಿಗಳ ನಾದ, ನಾನಾ ವಿಧ ಹಣ್ಣುಗಳ ಮರಗಳು, ಹಣ್ಣಿನ ಆಕರ್ಷಣೆಗೆ ಬರುವ ವಿವಿಧ ಚಿತ್ರವಿಚಿತ್ರ ಬಣ್ಣಬಣ್ಣದ ರೆಕ್ಕೆಪುಕ್ಕಗಳುಳ್ಳ ಮುದ್ದು ಹಕ್ಕಿಗಳು, ಅವುಗಳ ಇಂಪಾದ ಚಿಲಿಪಿಲಿಗಾನ, ಗಿರಿ ನದಿಯ ಝರಿಯ ಜುಳುಜುಳು ನಾದ, ನದಿಯಲ್ಲಿ ವಿಹರಿಸುವ ಚಕೋರ ಹಂಸ ಚಕ್ರವಾಕ ಭಾರದ್ವಾಜ ಮೊದಲಾದ ಜಲಚರಪಕ್ಷಿಗಳು ಅವುಗಳ ಝೇಂಕಾರ ಧ್ವನಿ, ನದಿಯ ಕಮಲ ಕನ್ನೈದಿಲೆ ಮೊದಲಾದ ಪುಷ್ಪಗಳ ದಿವ್ಯ ಪರಿಮಳ, ಸದಾ ಸುತ್ತುವ ಶೀತಲವಾದ ಮಂದ ಮಾರುತ... ಇಂತಹ ಸುಂದರ ಪರಿಸರ ಯಾರ ಮನವನ್ನು ತಾನೇ ಅರಳಿಸದೆ ಇರುವುದು !

ಇಂತಹ ಪರಮ ಸುಂದರ ಪವಿತ್ರ ರಮಣೀಯ ವನ ಪ್ರದೇಶದಲ್ಲಿ ಕೃಷ್ಣ ತನ್ನ ಒಡನಾಡಿ ಗೋಪಾಲರೊಡನೆ ಆಡಿದ ಆಟಗಳು ಎಷ್ಟೋ! ಆಟದಲ್ಲಿ ಆಯಾಸಗೊಂಡು ವಿಶ್ರಮಿಸುವಾಗ ಗೋಪಬಾಲರಿಂದ ಪಡೆದ ಸೇವೆಯ ವೈವಿಧ್ಯಗಳೆಷ್ಟೋ. ಇಲ್ಲಿ ಕೃಷ್ಣನು ತೋರಿದ ಲೀಲಾವಿನೋದಗಳು ಧೇನುಕ, ಕಾಲಿಯ ಮೊದಲಾದವರ ಉದ್ಧಾರ, ದಾವಾಗ್ನಿಯಿಂದ ಸಂರಕ್ಷಣೆ, ರಾಸಲೀಲೆ.. ಇಂಥ ವಿಸ್ಮಯಕಾರೀ ಘಟನೆಗಳೆಷ್ಟೋ!

## ಗೋವರ್ಧನ ಗಿರಿಧಾರಿ

ಕೃಷ್ಣನ ಇಂತಹ ಅದ್ಭುತ ಸಾಹಸಗಳ, ತರ್ಕಕ್ಕೆ ನಿಲುಕದ, ಕಲ್ಪಿಸಲೂ ಆಗದ, ರೋಮಾಂಚಕ ಲೀಲೆಗಳನ್ನು ಗೋಪಾಲಕರು ಮೆಲುಕುಹಾಕುತ್ತ ಆತನ ಅಲೌಕಿಕತೆಯನ್ನು ಭಾವಿಸುತ್ತಿರುವಾಗಲೇ ಸಮೀಪಿಸಿತು ಇಂದ್ರಯಜ್ಞದ ಕಾಲ. ವೃಂದಾವನದಲ್ಲಿ ನಡೆಯುತ್ತಿರುವ ಸಂಭ್ರಮವನ್ನು ಗಮನಿಸಿದ ಕೃಷ್ಣ ಅಪ್ಪನನ್ನು ಈ ಚಟುವಟಿಕೆಗಳ ಉದ್ದೇಶವೇನೆಂದು ಕೇಳಿದನು. ನಂದಗೋಪನು, ''ಇಂದ್ರನ ಅನುಗ್ರಹದಿಂದ ಕಾಲಕಾಲಕ್ಕೆ ಮಳೆಯಾಗುವುದು, ಅದರಿಂದ ಸಸ್ಯಸಮೃದ್ಧಿ. ಅದಕ್ಕಾಗಿ ಇಂದ್ರನಿಗೆ ಕೃತಜ್ಞತೆ ತೋರಿಸುವುದೇ ಈ ಉತ್ಸವದ ಆಚರಣೆ'' ಎಂದು ಕೃಷ್ಣನಿಗೆ ತಿಳಿಸಿದನು. ಅದಕ್ಕೆ ಕೃಷ್ಣ, ''ಅಪ್ಪ ನಾವು ಗೊಲ್ಲರು, ವನವಾಸಿಗಳು. ನಮಗೆ ಕಾಡು, ಅಲ್ಲಿನ ಹುಲ್ಲುಗಾವಲು, ಪರ್ವತ – ಇವೇ ಆಸರೆ. ಆದುದರಿಂದ ನಾವು ಗೋವರ್ಧನ ಪರ್ವತದ ಪೂಜೆಯನ್ನು ಮಾಡೋಣ'' ಎಂದು ತರ್ಕಬದ್ಧವಾಗಿ ತನ್ನ ವಿಚಾರವನ್ನು ತಿಳಿಸಿದನು. ಗೋಪಾಲರಲ್ಲಿ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದರೂ ಎಲ್ಲರೂ ಉತ್ಸವದಲ್ಲಿ ಭಾಗವಹಿಸುವ ನಿರ್ಣಯಕ್ಕೆ ಬದ್ಧರಾದರು. ಶಾಸ್ತ್ರದಲ್ಲಿ ಹೇಳಿರುವ ಕ್ರಮದಲ್ಲಿ ಪೂಜೆ, ಹವನ, ಯಜ್ಞ ಎಲ್ಲಾ ಸಂಪೂರ್ಣವಾಯಿತು. ಇನ್ನೇನು, ನೈವೇದ್ಯವನ್ನಿಟ್ಟು ಎಲ್ಲರೂ ಗಿರಿರಾಜನಿಗೆ ಪ್ರದಕ್ಷಿಣೆ ನಮಸ್ಕಾರ ಮಾಡಬೇಕು – ಆ ಸಂದರ್ಭದಲ್ಲಿ,

ಪರ್ವತದ ಶಿಖರದಲ್ಲಿ ದೊಡ್ಡದಾದ ರೂಪದಲ್ಲಿ ಸ್ವಯಂ ಕೃಷ್ಣನೇ ಪ್ರಕಟಗೊಂಡನು. ''ನಾನು ಗಿರಿರಾಜ'' ಎಂದು ಕೂಗಿ ಹೇಳುತ್ತಾ ಅಲ್ಲಿ ಅವರಿಟ್ಟಿದ್ದ ಎಲ್ಲಾ ನೈವೇದ್ಯವನ್ನು ಸ್ವೀಕರಿಸಿದನು. ಈ ಪರ್ವತ ಯಾವ ರೂಪವನ್ನಾದರೂ ಧರಿಸಬಲ್ಲದು, ನಮ್ಮ ಕ್ಷೇಮಕ್ಕೂ ಗೋವುಗಳ ಕ್ಷೇಮಕ್ಕೂ ನಾವು ಈ ಪರ್ವತಕ್ಕೆ ನಮಸ್ಕಾರ ಮಾಡಿ ಗೌರವಿಸೋಣ ಎಂದು ಹೇಳುತ್ತಾ ಕೃಷ್ಣನು ಗೋಪಗೋಪಿಯರೊಡನೆ ತಾನೂ ತನ್ನದೇ ಆದ ಆ ಮಹಾ ಸ್ವರೂಪಕ್ಕೆ ನಮಸ್ಕಾರವನ್ನೂ ಮಾಡಿದನು. ವಿಧಿಪೂರ್ವಕವಾಗಿ ಈ ಉತ್ಸವವನ್ನು ಸಂಪನ್ನಗೊಳಿಸಿ, ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಬಂದು ಸೇರಿದರು.

ತನಗೆ ಆದ ಅಪಮಾನವನ್ನು ತಾಳದೆ ಇಂದ್ರನು ಗೋಪರಿಗೆ ಬುದ್ಧಿ ಕಲಿಸುವೆನೆಂದು ಭಯಂಕರವಾದ ಮೋಡಗಳನ್ನು ಸೃಷ್ಟಿ ಮಾಡಿ, ಬಿರುಗಾಳಿ ಸಹಿತ ಆಲಿಕಲ್ಲುಗಳ ಮಳೆಯನ್ನು ಸುರಿಸುವಂತೆ ಅವುಗಳಿಗೆ ಅಜ್ಞಾಪಿಸಿದನು. ಮಳೆಯ ರಭಸಕ್ಕೆ ಗೋಕುಲವೇ ಕೊಚ್ಚಿ ಹೋಗುವಂತಹ ಸ್ಥಿತಿ ಉಂಟಾಯಿತು. ಇದರಿಂದ ಕಂಗೆಟ್ಟ ಗೋಪಾಲಕರೆಲ್ಲರೂ ಕೃಷ್ಣನಿಗೆ ಮೊರೆಹೋದರು. ಕೃಷ್ಣ ಲೀಲಾಜಾಲವಾಗಿ ಸಣ್ಣಮಕ್ಕಳು ನಾಯಿಕೊಡೆಯನ್ನು ಹಿಡಿದುಕೊಳ್ಳುವಂತೆ ಆ ಬೃಹತ್ ಗಾತ್ರದ ಗೋವರ್ಧನವನ್ನು ಕಿತ್ತು, ಒಂದೇ ಕೈಯಲ್ಲಿ ಎತ್ತಿಹಿಡಿದನು. ಆ ಗೋವರ್ಧನ ಪರ್ವತವನ್ನು ಕಿತ್ತ ಜಾಗದಲ್ಲಿ ಉಂಟಾದ ಹಳ್ಳವನ್ನು ಕೃಷ್ಣನು ತೋರಿಸುತ್ತ, ''ನೀವೆಲ್ಲರೂ, ನಿಮ್ಮ ನಿಮ್ಮ ಗೋವುಗಳು ಹಾಗೂ ಸಕಲ ಸಾಮಗ್ರಿಗಳೊಂದಿಗೆ ಆ ಹಳ್ಳದಲ್ಲೇ ಆತಂಕವಿಲ್ಲದೆ ಕುಳಿತುಕೊಳ್ಳಿರಿ'' ಎಂದು ಕೃಷ್ಣನು ಆಜ್ಞಾಪಿಸಿದನು. ಆ ಹಳ್ಳದಲ್ಲಿ ಒಂದು ಹನಿ ಮಳೆಯೂ ಬೀಳದಂತೆ ಕೃಷ್ಣನು ಪರ್ವತವನ್ನು ಎತ್ತಿಹಿಡಿದು ನಿಂತನು. ಇಡೀ ವ್ರಜ ನಿವಾಸಿಗಳು ತಮ್ಮ ಸಾಕು ಪ್ರಾಣಿಗಳೊಡನೆ, ಸ್ವಲ್ಪವೂ ಇಕ್ಕಟ್ಟಿಲ್ಲದಂತೆ ಹಾಯಾಗಿ ಗೋವರ್ಧನ ಪರ್ವತದ ಹಳ್ಳದಲ್ಲಿ ನೆಲೆಸಿದರು. ಏಳು ದಿನಗಳ ಕಾಲ ಹಸಿವು ಬಾಯಾರಿಕೆ ಮುಂತಾದ ಯಾವ ಬಾಧೆಯೂ ಇಲ್ಲದೆ, ಕೃಷ್ಣ ಒಂದು ಹೆಜ್ಜೆಯಷ್ಟೂ ಕದಲದೆ ಗಿರಿಯನ್ನೆತ್ತಿಕೊಂಡು ಹಾಗೆಯೇ ನಿಂತಿದ್ದನು. ಇಂದ್ರನ ಮೋಡಗಳ ಶಕ್ತಿ ಕುಗ್ಗಿತೇ ಹೊರತು, ಕೃಷ್ಣನಿಗಾಗಲೀ ಗೋಪಗೋಪಿಯರಿಗಾಗಲೀ, ಪಶು ಪಕ್ಷಿಗಳಿಗಾಗಲೀ ಯಾವ ತೊಂದರೆಯೂ ಉಂಟಾಗಲಿಲ್ಲ. ಕೊನೆಗೆ ಸೋತ ಇಂದ್ರನು ತನ್ನ ಮೋಡಗಳನ್ನು ಹಿಂದಕ್ಕೆ ಕರೆಸಿಕೊಂಡನು. ಅನಂತರ ಕೃಷ್ಣ ಎಲ್ಲರನ್ನು ಆ ಹಳ್ಳದಿಂದ ಮೇಲಕ್ಕೆ ಬರಲು ಹೇಳಿ, ಗೋವರ್ಧನ ಗಿರಿಯನ್ನು ಮತ್ತೆ ಅದರ ಸ್ಥಾನದಲ್ಲಿ ಇರಿಸಿದ.

ಈ ಪ್ರಸಂಗವನ್ನು ಭಾಗವತದ ಹತ್ತನೆಯ ಸ್ಕಂಧದ ೨೪–೨೬ನೇ ಅಧ್ಯಾಯಗಳು ಹೃದಯಂಗಮವಾಗಿ ಹಾಗೂ ವಿಸ್ತಾರವಾಗಿ ವಿವರಿಸುತ್ತವೆ.

### ಗೋವರ್ಧನದ ಪೂರ್ವಚರಿತೆ

ಈ ಗೋವರ್ಧನ ಪರ್ವತ ವೃಂದಾವನಕ್ಕೆ ಬಂದುದೇ ಒಂದು ರೋಚಕ ಪ್ರಸಂಗ. ಶಾಲ್ಮಲೀ ದ್ವೀಪದಲ್ಲಿರುವ ದ್ರೋಣಾಚಲನ ಮಗನೀತ. ಈತನ ಜನ್ಮ ಮೂರು ಲೋಕಗಳಿಗೂ ಆನಂದವನ್ನುಂಟುಮಾಡಿತು. ದೇವತೆಗಳು ಗೋವರ್ಧನನ ಗುಣಗಾನ ಮಾಡಿ ಆತನ ಮೇಲೆ ಹೂಮಳೆಗರೆದರು. ಈತನ ಜನ್ಮವಾಗಿ ನೂರುವರ್ಷಗಳಾದ ಮೇಲೆ ಸತ್ಯಯುಗ ಆರಂಭವಾಯಿತು. ಆ ಕಾಲದಲ್ಲಿ ಬ್ರಹ್ಮನ ಮಾನಸಪುತ್ರರಲ್ಲಿ ಒಬ್ಬರಾದ ಪುಲಸ್ತ್ಯ ಮುನಿಗಳು ಶಾಲ್ಮಲೀ ದ್ವೀಪಕ್ಕೆ ಬಂದರು. ಗೋವರ್ಧನನ ಸೌಂದರ್ಯದಿಂದ ಆಕರ್ಷಿತರಾದ ಅವರು, ಆತನ ದರ್ಶನ ಮಾತ್ರದಿಂದಲೇ ಪುಲಕಿತರಾದರು. ತಮ್ಮ ತಪಸ್ಸಿಗೆ ಈ ಗಿರಿಯೇ ಅತ್ಯಂತ ಪ್ರಶಸ್ತವಾದುದೆಂದು ತೀರ್ಮಾನಿಸಿ, ದ್ರೋಣಾಚಲನನ್ನು ತನಗೆ ಗೋವರ್ಧನನನ್ನು ಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಮಗನನ್ನು ಅಗಲಲಾರದೆ ಬಹಳ ಕಷ್ಟಪಟ್ಟ ಆತ, ಕೊನೆಗೂ ಪುಲಸ್ತ್ಯರ ನಿರ್ಬಂಧಕ್ಕೆ ಸೋತು ಗೋವರ್ಧನನನ್ನು ಅವರಿಗೆ ಕೊಟ್ಟುಬಿಟ್ಟನು. ಆದರೆ ಅವರು ತಮ್ಮ ಗಮ್ಯ ಸೇರುವಲ್ಲಿಯವರೆಗೆ ಮಾರ್ಗಮಧ್ಯದಲ್ಲಿ ಎಲ್ಲೂ ಗೋವರ್ಧನನನ್ನು ಇಡಬಾರದೆಂದು ದ್ರೋಣಾಚಲನು ಒಂದು ಷರತ್ತು ಹಾಕಿದ. ಅಪ್ಪನನ್ನು ಅಗಲಲಾರದ ಗೋವರ್ಧನನೂ, ''ಮಾರ್ಗ ಮಧ್ಯದಲ್ಲಿ ಎಲ್ಲಿ ಇಳಿಸಿದರೂ, ನನ್ನನ್ನು ನೀನು ಮತ್ತೆ ಎತ್ತಲಾರೆ'' ಎಂದನು. ಪುಲಸ್ತ್ಯರು ಪವಿತ್ರವಾದ ಕ್ಷೇತ್ರವಿದ್ದಲ್ಲಿ ಅವನನ್ನಿರಿಸಿ, ಅಲ್ಲಿ ತಪಸ್ಸು ಮಾಡುವ ಸಂಕಲ್ಪ ಹೊತ್ತು, ಬಲಗೈಯಲ್ಲಿ ಅವನನ್ನೆತ್ತಿಕೊಂಡು ವೇಗದಿಂದ ಹೆಜ್ಜೆ ಹಾಕುತ್ತಿದ್ದರು. ದಾರಿಯಲ್ಲಿ ಚಿತ್ತಾಕರ್ಷಕವಾದ ಪ್ರಕೃತಿ ಲಾವಣ್ಯದಿಂದ ಮೆರೆಯುತ್ತಿರುವ ಬೃಂದಾವನವನ್ನು ಕಂಡ ಗೋವರ್ಧನನಿಗೆ ಅಲ್ಲೇ ನೆಲೆಸಬೇಕು ಎಂಬ ಹಂಬಲವುಂಟಾಯಿತು. ಇದೇ ಸಂದರ್ಭದಲ್ಲಿ ಪುಲಸ್ತ್ಯರಿಗೂ ಕೈ ನೊಂದ ಕಾರಣ ವಿಧಿಯಿಲ್ಲದೆ ಅವನನ್ನು ಕೆಳಗಿಳಿಸಿದರು. ಬೇರೆ ಕೈಗೆ ಬದಲಾಯಿಸಿಕೊಂಡು ಎತ್ತಿಕೊಳ್ಳಲು ಪ್ರಯತ್ನಿಸಿದಾಗ, ಅವನು ಮೇಲೇಳಲೇ ಇಲ್ಲ. ಕೋಪಗೊಂಡ ಪುಲಸ್ತ್ಯರು ಪ್ರತಿದಿನಕ್ಕೆ ಒಂದು ಸಾಸಿವೆ ಕಾಳಿನಷ್ಟರಂತೆ ನೀನು ಸವೆಯುತ್ತ ಹೋಗು ಎಂದು ಶಪಿಸಿ, ಅವನನ್ನು ಅಲ್ಲೇ ಬಿಟ್ಟು ತಮ್ಮ ತಪಸ್ಸಿಗಾಗಿ ಕಾಶೀಕ್ಷೇತ್ರಕ್ಕೆ ಬಂದು ತಲುಪಿದರು. ಅಲ್ಲಿನ ಜನಪದದಲ್ಲಿ ಈ ಪ್ರಸಂಗ ಜನಜನಿತವಾಗಿದೆ.

### ಭಕ್ತಭಾವ ಪೂರಕ ಗೋವರ್ಧನ

ವೃಂದಾವನದಲ್ಲಿ ನೆಲೆಸಿದ ಗೋವರ್ಧನನು ಪರಬ್ರಹ್ಮ ಸ್ವರೂಪಿ ಕೃಷ್ಣನ ಸಂಪರ್ಕದಿಂದ ಪರಮಪಾವನನಾದ; ಭಾವುಕರು ಮನಸ್ಸು ಇಂದ್ರಿಯ (ಗೋ) ಗಳನ್ನೆಲ್ಲಾ ಒಳಸೆಳೆದು, ಮೈಮನ ಮರೆತು ಸಮಾಧಿಯಲ್ಲಿ ಸ್ಥಿರವಾಗುವಂತೆ ಅವರ ಭಾವವರ್ಧಕ(ವರ್ಧನ)ನಾದ; ಭೂಭಾಗದ(ಗೋ) ಪಾವಿತ್ರ್ಯ